ದಿನಾಂಕ: 17.01.2025 ರಂದು ಸಾಕ್ಷಿಗೆ ಪ್ರಮಾಣವಚನ ಮಾಡಿಸಲಾಯಿತು.

**ಪಾಟೀ ಸವಾಲು: 2ನೇ ಎದುರುದಾರರ ಪರ: ಶ್ರೀ ಎಸ್ ಸಿ ಕೆ ವಕೀಲರಿಂದ:**

1. ಮೃತ ಸಂಜು ನನ್ನ ಮಗನಾಗಬೇಕು. ಸಂಜು ನನ್ನ ಮಗ ಎಂದು ತೋರಿಸಲು ನಾನು ಆಧಾರ್ ಕಾರ್ಡ್ ಮತ್ತು study certificate ಅನ್ನು ನೀಡಿದ್ದು, ಯಾವುದೇ ಉತ್ತರಜೀವಿ ಪ್ರಮಾಣಪತ್ರವನ್ನು ನೀಡಿಲ್ಲ. ನಾನು 5ನೇ ತರಗತಿಯ ವರೆಗೂ ಓದಿರುತ್ತೇನೆ. ನಿಪಿ 9 ಅನ್ನು ಸಾಕ್ಷಿಗೆ ತೋರಿಸಿ ಅದು ಯಾರ ಆಧಾರ್ ಕಾರ್ಡ್ ಎಂದು ಕೇಳಿದ್ದಕ್ಕೆ ಅದು ನನ್ನ ಮಗ ಸಂಜಯ್ ಆಧಾರ್ ಕಾರ್ಡ್ ಎಂದು ನುಡಿಯುತ್ತಾರೆ. ನಿಪಿ 9 ರಲ್ಲಿ ನನ್ನ ಹೆಸರು ನಮೂದು ಇಲ್ಲ ಎಂದರೆ ಸಾಕ್ಷಿ ಹೌದು. ಆದರೆ ಆಕೆಯ ತಾಯಿಯ ಹೆಸರು ನಮೂದು ಇದೆ ಎಂದು ನುಡಿಯುತ್ತಾರೆ. ಸಂಜಯ್ ಗೆ ಸಂಬಂಧಿಸಿದಂತೆ ನನ್ನ ಪತ್ನಿ ಎಲ್. ಆರ್. ನಂದಿನಿ ಹಾಗೂ ನನ್ನ ಮತ್ತೊಬ್ಬ ಮಗ ಮಂಜುನಾಥ್ ಅಪರ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಮತ್ತೊಂದು ಕೇಸ್ ಸಲ್ಲಿಸಿದ್ದರು ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದು ನಿಮ್ಮ ಪತ್ನಿ ಮತ್ತು ಮತ್ತೊಬ್ಬ ಮಗ ಸಲ್ಲಿಸಿರುವ ಕೇಸ್ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ಕಾರಣಕ್ಕೆ ಸದರಿ ದಾಖಲಾತಿಯನ್ನು ನಿ ಆರ್ 1 ಎಂದು ಗುರುತಿಸಲಾಗಿದೆ. ನಿ ಆರ್ 1 ರಲ್ಲಿ ಮೃತ ಸಂಜಯ್ ಅವರ ತಂದೆಯ ಹೆಸರು ಲೇಟ್ ಬೋರೇಗೌಡ ಎಂದು ತೋರಿಸಿರುತ್ತಾರೆ ಎಂದರೆ ಸರಿ. ನನ್ನ ಪತ್ನಿ ನಂದಿನಿ ಈಗ ಮರಣ ಹೊಂದಿದ್ದು, ಆಕೆಯ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ನಾನು ಚಿಕ್ಕಾಪುರ, ತುಮಕೂರು ಜಿಲ್ಲೆಯಲ್ಲಿ ವಾಸವಾಗಿರುತ್ತೇನೆ. ನಾನು ಮರುವಿವಾಹ ಮಾಡಿಕೊಂಡಿರುವುದಿಲ್ಲ. ನಂದಿನಿ, ಮಂಜುನಾಥ್ ಮತ್ತು ಸಂಜಯ್ ಬೆಂಗಳೂರಿನಲ್ಲಿ ವಾಸವಾಗಿದ್ದರು. ನಂದಿನಿ, ಮಂಜುನಾಥ್ ಮತ್ತು ಸಂಜಯ್ ಹಾಗೂ ನಾನು ಪ್ರತ್ಯೇಕ ವಾಸವಾಗಿದ್ದ ಕಾರಣ ನಂದಿನಿ ಮತ್ತು

ಮಂಜುನಾಥ್ ಪ್ರತ್ಯೇಕ ಕೇಸನ್ನು ನನ್ನನ್ನು ಮೃತ ಎಂದು ತೋರಿಸಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ನಾವು ಮನಸ್ತಾಪದಿಂದ ಬೇರೆ ಇದ್ದು, ಯಾವುದೇ ವಿಚ್ಛೇದನವಾಗಿಲ್ಲ ಎಂದು ನುಡಿಯುತ್ತಾರೆ. ಮಂಜುನಾಥ್ ಬೆಂಗಳೂರಿನಲ್ಲಿ ವಾಸವಾಗಿದ್ದು, ಆತ ಖಾಸಗಿ ಕೆಲಸ ಮಾಡುತ್ತಾನೆ. ಆತನಿಗೆ ಮದುವೆಯಾಗಿರುವುದಿಲ್ಲ. ಆತ ನನ್ನೊಂದಿಗೆ ವಾಸವಾಗಿರುವುದಿಲ್ಲ. ಮೃತ ಸಂಜಯ್ ದುಡಿಮೆಯ ಮೇಲೆ ನನ್ನ ಪತ್ನಿ ನಂದಿನಿ ಹೊರತುಪಡಿಸಿ ನಾನಾಗಲೀ ಅಥವಾ ಮಂಜುನಾಥ್ ಆಗಲೀ ಅವಲಂಬಿತವಾಗಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಆತ ಆಗಾಗ ಬಂದು ನನ್ನನ್ನು ನೋಡಿಕೊಳ್ಳುತ್ತಿದ್ದ ಎಂದು ನುಡಿಯುತ್ತಾರೆ. ನಾನು ಮೊದಲು ಭಟ್ಟರ ಕೆಲಸ ಮಾಡುತ್ತಿದ್ದು, ಈಗ ಹೃದಯ ಶಸ್ತ್ರ ಚಿಕಿತ್ಸೆಯಾಗಿದ್ದು, ಸಣ್ಣ ಪುಟ್ಟ ಕೆಲಸ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ನಾನಾಗಲೀ ಅಥವಾ ಮಂಜುನಾಥ್ ಆಗಲೀ ಮೃತ ಸಂಜಯ್ ಅವರ ದುಡಿಮೆಯ ಮೇಲೆ ಅವಲಂಬಿತವಾಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯಬೇಕೆಂಬ ದುರುದ್ದೇಶದಿಂದ ಸಂಜಯ್ ನನ್ನನ್ನು ನೋಡಿಕೊಳ್ಳುತ್ತಿದ್ದ ಎಂದು ಸುಳ್ಳುಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಅಪಘಾತವನ್ನು ನಾನು ಪ್ರತ್ಯಕ್ಷ ನೋಡಿರುವುದಿಲ್ಲ. ಅಪಘಾತವು ಯಾವ ರೀತಿ ಆಗಿರುತ್ತದೆ ಎಂದು ನಾನು ಕೇಳಿ ತಿಳಿದುಕೊಂಡಿರುತ್ತೇನೆ. ದಿಃ 16.12.2016 ರಂದು ನನ್ನ ಮಗ ಸಂಜಯ್ ದ್ವಿ ಚಕ್ರ ವಾಹನವನ್ನು ಚಲಾಯಿಸಿಕೊಂಡು ಬರುತ್ತಿದ್ದು, ಸುಮಾರು 11.45 ಗಂಟೆಯಲ್ಲಿ ಯಾವುದೇ ಸೂಚನೆ ಕೊಡದೇ ನಿಲ್ಲಿಸಿರುವ ಲಾರಿಗೆ ಡಿಕ್ಕಿಪಡಿಸಿ ಅಪಘಾತವಾಗಿರುತ್ತದೆ. ಲಾರಿಯ ಯಾವ ಭಾಗಕ್ಕೆ ನನ್ನ ಮಗನ ಬೈಕ್ ಡಿಕ್ಕಿಯಾಗಿರುತ್ತದೆ ಎಂದು ಗೊತ್ತಿಲ್ಲ. ಸದರಿ ಬೈಕ್ ನನ್ನ ಮೊದಲನೇ ಮಗ ಮಂಜುನಾಥ್ ಮಾಲೀಕತ್ವದಲ್ಲಿತ್ತು. ಮೃತ

ಸಂಜಯ್ ಬಳಿ ಬೈಕ್ ಚಲಾಯಿಸಲು ಡಿ ಎಲ್ ಇತ್ತು. ನಾನು ಡಿಎಲ್ ಅನ್ನು ನೋಡಿದ್ದು, ಅದನ್ನು ಆತ ಮಂಡ್ಯ ಆರ್ ಟಿ ಒ ರವರಿಂದ ಮಾಡಿಸಿರುತ್ತಾನೆ. ಸದರಿ ದಾಖಲಾತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾಖಲಾತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಮೃತ ಸಂಜಯ್ ಬಳಿ ಡಿ ಎಲ್ ಇಲ್ಲದ ಕಾರಣ ಅದನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

3. ನಾನು ದೋಷಾರೋಪಣಾ ಪಟ್ಟಿಯನ್ನು ಓದಿ ತಿಳಿದುಕೊಂಡಿಲ್ಲ. ಮೃತ ಸಂಜಯ್ ಅತಿವೇಗವಾಗಿ ಬಂದು ಕೆಟ್ಟು ನಿಂತಿದ್ದ ಲಾರಿಗೆ ಡಿಕ್ಕಿ ಪಡಿಸಿರುವ ಕಾರಣ ಮೃತ ಸಂಜಯ್ ಅನ್ನು 2ನೇ ಆರೋಪಿಯಾಗಿ ಮಾಡಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಸಾಕ್ಷಿಗೆ ನಿಪಿ 3 ಅನ್ನು ತೋರಿಸಿ ಅದರಲ್ಲಿ ಪೊಲೀಸರು ತಯಾರಿಸಿರುವ ನಕಾಶೆಯನ್ನು ನೋಡಿದ್ದಲ್ಲಿ ಲಾರಿ ರಸ್ತೆಯ ಎಡಭಾಗದಲ್ಲಿ ನಿಂತಿದ್ದು, ಸಂಜಯ್ 10 ಅಡಿ ಜಾಗ ರಸ್ತೆಯಲ್ಲಿದ್ದರೂ ಸಹ ಎಡಭಾಗದಲ್ಲಿ ಹೋಗಿ ಡಿಕ್ಕಿಪಡಿಸಿರುವುದು ಕಂಡು ಬರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಪಂಚನಾಮೆಯ ಪ್ರಕಾರ ಲಾರಿ ಹಿಂಭಾಗದಲ್ಲಿ ಕಲ್ಲನ್ನು ಇಟ್ಟಿದ್ದು, ಎಡಭಾಗದ ಇಂಡಿಕೇಟರ್ ಸಹ ಅಳವಡಿಸಿದ್ದರೂ ಸಹ ಸಂಜಯ್ ಅತಿವೇಗವಾಗಿ ಬಂದು ಅಪಘಾತಪಡಿಸಿಕೊಂಡಿರುತ್ತಾನೆ ಎಂದು ನಮೂದು ಇದೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಪಘಾತವು ಮೃತ ಸಂಜಯ್ ಅವರ ತಪ್ಪಿನಿಂದ ಆಗಿದ್ದು, ಲಾರಿ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕೆ 2ನೇ ಎದುರುದಾರರು ಪರಿಹಾರ ನೀಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

4. ಮೃತ ಸಂಜಯ್ ಜೀವಂತವಿದ್ದಾಗ ಕಾರ್ ಚಾಲಕನಾಗಿ ಕೆಲಸ ಮಾಡುತ್ತಿದ್ದನು. ಮೃತ ಸಂಜಯ್ ಮಾಸಿಕ ರೂ. 15 ಸಾವಿರ ದುಡಿಯುತ್ತಿದ್ದನು. ಮೃತ ಸಂಜಯ್ ಚಾಲಕನಾಗಿ ಕೆಲಸ ಮಾಡಿ ಮಾಸಿಕ ರೂ. 15 ಸಾವಿರ ದುಡಿಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ಮೃತ ಸಂಜಯ್ ಚಾಲಕನಾಗಿ ಕೆಲಸ ಮಾಡುತ್ತಿದ್ದಲ್ಲಿ ಹಾಗೂ ಮಾಸಿಕ ರೂ. 15 ಸಾವಿರ ದುಡಿಯುತ್ತಿದ್ದಲ್ಲಿ ನಾನು ಮತ್ತು ಡಿಎಲ್ ಮತ್ತು ದಾಖಲಾತಿಗಳನ್ನು ಹಾಜರುಪಡಿಸುತ್ತಿದ್ದೆ ಎಂದರೆ ಸಾಕ್ಷಿ ಆತ ಚಾಲಕನಾಗಿ ಕೆಲಸ ಮಾಡುತ್ತಿದ್ದ ಎಂದು ನುಡಿಯುತ್ತಾರೆ. ಸಾಕ್ಷಿ ಆತ ಯಾವುದೇ ಕೆಲಸ ಮಾಡದೇ ಇರುವ ಕಾರಣ ನಾನು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಶವ ಸಾಗಾಣಿಕೆಗೆ ರೂ. 30 ಸಾವಿರ ಹಾಗೂ ಕಾರ್ಯಕ್ಕೆ ರೂ.1 ವರೆ ಲಕ್ಷ ಖರ್ಚು ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನಾಗಲೀ ಅಥವಾ ಮಂಜುನಾಥ್ ಆಗಲೀ ಮೃತ ಸಂಜಯ್ ಅವರ ದುಡಿಮೆಯ ಮೇಲೆ ಅವಲಂಬಿತವಾಗಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತವು ಮೃತ ಸಂಜಯ್ ಅವರ ತಪ್ಪಿನಿಂದ ಆದ ಕಾರಣ 2ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4ನೇ ಎದುರುದಾರರ ಪರಃ ಶ್ರೀ ಎಸ್ ಜೆ ಡಿ ವಕೀಲರಿಂದಃ**

ನಾವು ಪರಿಹಾರವನ್ನು ಕಲಂ 166 ಐ ವಿ ಆಕ್ಟ್ ನ ಅಡಿಯಲ್ಲಿ ಕೇಳಿದ್ದೇವೆ ಎಂದರೆ ಸರಿ. ಮೃತ ಸಂಜಯ್ ಕೆಟ್ಟು ನಿಂತಿದ್ದ ಲಾರಿಗೆ ಡಿಕ್ಕಿ ಪಡಿಸಿರುವ ಕಾರಣ ಮೃತ ಸಂಜಯ್ ಅನ್ನು 2ನೇ ಆರೋಪಿಯಾಗಿ ಮಾಡಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಕ್ರಿಮಿನಲ್ ಪ್ರಕರಣದಲ್ಲಿ ನನ್ನ ಮೃತ ಮಗನ ವಿರುದ್ದ abated charge sheet ಸಲ್ಲಿಸಿರುತ್ತಾರೆ ಎಂದರೆ

ಸರಿ. 4ನೇ ಎದುರುದಾರರನ್ನು ಈ ಪ್ರಕರಣದಲ್ಲಿ ಫಾರ್ಮಲ್ ಪಾರ್ಟಿಯಾಗಿ ಸೇರಿಸಲಾಗಿದೆ ಎಂದರೆ ಸರಿ. ನನ್ನ ಮಗನ ತಪ್ಪಿ ನಿಂದ ಅಪಘಾತವಾದ ಕಾರಣ ಕಲಂ 166 ರಲ್ಲಿ ನಾನು ಪರಿಹಾರ ಕೇಳಲು ಬರುವುದಿಲ್ಲ ಎಂದರೆ ಸರಿ. 4ನೇ ಎದುರುದಾರರನ್ನು ಈ ಪರಿಹಾರ ಅರ್ಜಿಯಲ್ಲಿ ತಪ್ಪಾಗಿ ಸೇರಿಸಲಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ.